ವಿಷಯ : ಬ್ಯಾಡಗಿ ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಲ್ಲಿ ನಿರ್ಮಾಣ ಮಾಡಲಾದ ಡಾಂಬರು ರಸ್ತೆಗಳ ಕುರಿತು

ಪ್ರ. ಸಂಖ್ಯೆ 563 (1463) ಶ್ರೀ ಹೆಗ್ಗಪ್ಪ (ಬ್ಯಾಡಗಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಬ್ಯಾಡಗಿ ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಲ್ಲಿ ನಿರ್ಮಾಣ ಮಾಡಲಾದ ಡಾಂಬರು ರಸ್ತೆಯ ಉದ್ದವೆಷ್ಟು ;

ಆ) ಇದೇ ಅವಧಿಯಲ್ಲಿ ಬ್ಯಾಡಗಿ ತಾಲ್ಲೂಕಿನಲ್ಲಿ ನಿರ್ಮಾಣ ಮಾಡಲಾದ ಹೊಸ ರಸ್ತೆಯ ಉದ್ದವೆಷ್ಟು ;

ಇ) ಈವರೆಗೆ ಬ್ಯಾಡಗಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರು ಯಾವ ಯಾವ ರಸ್ತೆ ಕಾರ್ಯಕ್ಕಾಗಿ ಒಟ್ಟು ಎಷ್ಟು ಹಣ ಖರ್ಚು ಮಾಡಿದ್ದಾರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) 3 ಕಿ.ಮಿ. ಉದ್ದ ಡಾಂಬರು ರಸ್ತೆ (ಹೊಸದು) ನಿರ್ಮಿಸಲಾಗಿದೆ. ಇದಲ್ಲದೆ 2.40 ಕಿ.ಮಿ. ರಸ್ತೆಗೆ ಮರು ಡಾಂಬರು ಹಾಕಲಾಗಿದೆ. (82-83ರ ಸಾಲಿನಲ್ಲಿ).

ಆ) ಮೇಲ್ಕಾಣಿಸಿದ ಅವಧಿಯಲ್ಲಿ 15.20 ಕಿ.ಮಿ. ಉದ್ದ ಹೊಸ ರಸ್ತೆ ನಿರ್ಮಾಣ ಮಾಡಲಾಗಿದೆ.

ಇ) 83-84ರ ಸಾಲಿನಲ್ಲಿ ಬ್ಯಾಡಕಿ ತಾಲ್ಲೂಕಿನಲ್ಲಿ ವಿವಿಧ ರಸ್ತೆ ಕಾಮಗಾರಿಗಳಿಗಾಗಿ (ಅಂದರೆ ಎಂ.ಎನ್.ಪಿ. ; ಐ ಸಿ.ಆರ್.ಪಿ. ಮಾಸ್ಟರ್ ಪ್ಲಾನ್ ; ಸಿ.ಡಿ. ವರ್ಕ್ಸ್ ಹರಿಜನವಾಡ ರಸ್ತೆ ನಿರ್ಮಾಣ ಅಭಿವೃದ್ಧಿ ಮತ್ತು ರಸ್ತೆ ನಿರ್ವಹಣೆ ಹಾಗೂ ದುರಸ್ತಿ ಇತ್ಯಾದಿ) ಒಟ್ಟು 9,52,080 ರೂಪಾಯಿಗಳನ್ನು ಫೆಬ್ರುವರಿ ಕೊನೆಯ ವೇಳೆಗೆ ಖರ್ಚು ಮಾಡಲಾಗಿದೆ.

ವಿಷಯ : ಸೇಡಂ ತಲ್ಲೂಕಿನಲ್ಲಿಯ ಗುಲ್ಬರ್ಗ-ಹೈದರಾಬಾದ್ (ಜಿ. ಕೆ. ರಸ್ತೆ) ದುರಸ್ತಿ ಕುರಿತು

ಪ್ರ. ಸಂಖ್ಯೆ 564 (1593) ಶ್ರೀ ನಾಗರೆಡ್ಡಿ ಲಚಮರೆಡ್ಡಿ ಪಾಟೀಲ್ (ಸೇಡಂ).—ಮಾನ್ಯ ಲೋಕೋಪಯೋಗ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ. ಸೇಡಂ ತಾಲ್ಲೂಕಿನಲ್ಲಿಯ ಗುಲ್ಬರ್ಗ-ಹೈದರಾಬಾದ್ ರಸ್ತೆಯು (ಜಿ.ಕೆ. ರಸ್ತೆ) ನಾಡು ರಸ್ತೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ. ಈ ರಸ್ತೆಯ ದುರಸ್ತಿಗಾಗಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದವರು ಖರ್ಚು ಮಾಡಿದ ಹಣದ ಮೊತ್ತವೆಷ್ಟು ;

ಇ. ಈ ರಸ್ತೆಯ ಮೇಲೆ ಪ್ರತಿ ದಿವಸ 10ರಿಂದ 15 ಟನ್‌ಗಳಷ್ಟು ತೂಕದ ಸಾಮಾನುಗಳನ್ನು ಹೊತ್ತು ಓಡಾಡುವ ವಾಹನ ಸಂಖ್ಯೆ ಎಷ್ಟು ;

ಈ. ಈ ರಸ್ತೆಯ ಸ್ಥಿತಿ ಸುಧಾರಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ. ಈ ರಸ್ತೆ ರಾಜ್ಯ ಹೆದ್ದಾರಿ ಎಂದು ಪರಿಗಣಿಸಲಾಗಿದೆ.

ಆ. 1980-81ರಿಂದ 82-83ರವರೆಗೆ 14.96 ಲಕ್ಷ ರೂ.ಗಳು ಖರ್ಚಾಗಿದೆ. 83-84ರಲ್ಲಿ ಫೆಬ್ರುವರಿ 84ರವರೆಗೆ 3.98 ಲಕ್ಷ ರೂ.ಗಳು ಖರ್ಚಾಗಿದೆ.

ಇ. 578 ವಾಹನಗಳು.

ಈ. ಈ ರಸ್ತೆಯ ಸುಧಾರಣೆಗಾಗಿ ಎರಡು ಕಾಮಗಾರಿಗಳನ್ನು 1983-84ನೇ ಸಾಲಿನ ಆಯವ್ಯಯದಲ್ಲಿ 24.275 ಲಕ್ಷ ರೂ.ಗಳ ಅಂದಾಜಿನಲ್ಲಿ ಸೇರಿಸಿದ್ದು ಟೆಂಡರ್ ಸಹಾ ಕರೆಯಲಾಗಿದ್ದು ಸಧ್ಯದಲ್ಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ವಿಷಯ : ಚಿಕ್ಕ ನೀರಾವರಿ ಕೆರೆಗಳ ನಿರ್ಮಾಣ ಹಾಗೂ ದುರಸ್ತಿ ಮಾಡುವುದು

ಪ್ರ. ಸಂಖ್ಯೆ 565 (1462) ಡಾ. ಹೆಗ್ಗಪ್ಪ (ಬ್ಯಾಡಗಿ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಬ್ಯಾಡಗಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿಗೆ ಯೋಗ್ಯವಾಗಿರುವ ಕೆರೆಗಳ ಸಂಖ್ಯೆ ಎಷ್ಟು ;

ಆ. ಬ್ಯಾಡಗಿ ತಾಲ್ಲೂಕಿನಲ್ಲಿ ಕಳೆದ ವರ್ಷ ಸಣ್ಣ ನೀರಾವರಿಗಾಗಿ ವೆಚ್ಚ ಮಾಡಲಾದ ಹಣ ಎಷ್ಟು ;

ಇ. ದುರಸ್ತಿ ನಿರ್ಮಾಣ ಮಾಡಲಾದ ಕೆರೆಗಳಾವುವು ;

ಈ. ಈ ಕೆರೆಗಳ ನಿರ್ಮಾಣ ದುರಸ್ತಿಯಿಂದ ಎಷ್ಟು ಎಕರೆ ಭೂಮಿಗೆ ನೀರು ಒದಗಿಸಲಾಯಿತು?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನಿರಾವರಿ ರಾಜ್ಯ ಸಚಿವರು).—

ಅ. ಈ ತಾಲ್ಲೂಕಿನಲ್ಲಿ ಒಟ್ಟು 173 ಕೆರೆಗಳಿವೆ.

ಆ. 1,50,400 ರೂಪಾಯಿಗಳು. (1982-83 ಸಾಲಿನಲ್ಲಿ)

ಇ. ದುರಸ್ತಿ ಮಾಡಲಾದ ಕೆರೆಗಳು ;

1. ಅತ್ತಿ ಕಟ್ಟಿ ಕೆರೆ	2. ಚಿಕ್ಕಬಾನೂರು ಕೆರೆ
3. ಫಾಳಪೂಜೆ ಕೆರೆ	4. ಕೆಂಗೊಂಡ ಕೆರೆ
5. ಅಂಗಾರಗಟ್ಟಿ ಕೆರೆ	6. ಮತ್ತೂರು ಕೆರೆ
7. ಬೀರನಕೊಪ್ಪ ಕೆರೆ	8. ಚಿಕ್ಕಬಾಸೂರು ಕೆರೆ
9. ಕಾಗಿನಲ್ಲಿ ಕೆರೆ	10. ಬುಡವನಹಳ್ಳಿ ಕೆರೆ.

ಈ. ಸಾಧಾರಣ ದುರಸ್ತಿ ಕೆಲಸಗಳನ್ನು ಪ್ರತಿ ವರ್ಷ ಮಾಡುತ್ತಿರುವುದರಿಂದ ನಿಗಧಿತ ಆಚ್ಚು ಕಟ್ಟು 3,442 ಹೆಕ್ಟೇರ್‌ಗೆ ನೀರು ಸರಬರಾಜು ಆಗುತ್ತಲಿದೆ.

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ನೀರಾವರಿಯ ಪ್ರಮಾಣದ ಬಗ್ಗೆ

ಪ್ರ. ಸಂಖ್ಯೆ 566 (1535) ಶ್ರೀ ಪಿ. ರಾಮಚಂದ್ರ ರಾವ್ (ಉಳ್ಳಾಲ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ನೀರಾವರಿಯ ಪ್ರಮಾಣವೆಷ್ಟು ? ಅದರಲ್ಲಿ ಸಣ್ಣ ನೀರಾವರಿಯ ಭಾಗವೆಷ್ಟು ;

ಆ. 1984-85ರ ಮುಂಗಡ ಪತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ, ಸಣ್ಣ ನೀರಾವರಿಗಾಗಿ ಎಷ್ಟು ಹಣ ಮೀಸಲಾಗಿದೆ ;

ಇ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅಸಂಖ್ಯಾತ ಹೊಳೆಗಳು ಮತ್ತು ಸಣ್ಣ ನದಿಗಳಿಂದ ಎಷ್ಟು ಎಕರೆ ಜಮೀನಿಗೆ ಸಣ್ಣ ನೀರಾವರಿ ಮಾಡುವ ಸಾಧ್ಯತೆಗಳಿವೆಯೇ ;

ಈ. ಈ ಸಾಧ್ಯತೆಗಳನ್ನು ಉಪಯೋಗಿಸಿಕೊಳ್ಳಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವ ಭರವಸೆಯನ್ನು ಸರ್ಕಾರದವರು ನೀಡುವರೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು.)—

ಅ. ಒಟ್ಟು ನೀರಾವರಿಯು ವಿಸ್ತೀರ್ಣ 71,040 ಹೆಕ್ಟೇರುಗಳು, ಸಣ್ಣ ನೀರಾವರಿ ಭಾಗ 17,091 ಹೆಕ್ಟೇರುಗಳು.

ಆ. 10.87 ರೂಪಾಯಿಗಳು.

ಇ. ಸಮೀಕ್ಷೆ ನಡೆಯುತ್ತಿದೆ.

ಈ. ಪರಿಶೀಲಿಸಲಾಗುವುದು.

ವಿಷಯ : ಪಾವಗಡ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕೆರೆಗಳು.

ಪ್ರಶ್ನೆ ಸಂಖ್ಯೆ 567 (1196) ಶ್ರೀ ಉಗ್ರನರಸಿಂಹಪ್ಪ (ಪಾವಗಡ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಪಾವಗಡ ತಾಲ್ಲೂಕಿಗೆ ಅನ್ವಯಿಸುವ ಸಣ್ಣ ನೀರಾವರಿಯ ಯೋಜನೆಯ ಪಟ್ಟಿಯಲ್ಲಿರುವ ಕೆರೆಗಳು ಯಾವುವು ? ಅಂಕಿ ಅಂಶಗಳನ್ನು ಒದಗಿಸುವುದು) ;

ಆ. ಯೋಜನೆಯಲ್ಲಿರುವ ಕೆರೆಗಳ ಕೆಲಸಗಳನ್ನು ನಿಲ್ಲಿಸಲು ಕಾರಣಗಳೇನು ;

ಇ. ಸದರಿ ಕೆಲಸಗಳನ್ನು ಮಾಡಲು ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ. 8 ನೀರಾವರಿ ಕೆರೆಗಳು 1983-84ನೇ ಸಾಲಿನ ಆಯವ್ಯಯದಲ್ಲಿ ಸೇರಿವೆ.

ವಿವರುಗಳು :

1. ಕೆಂಚಮ್ಮನಹಳ್ಳಿ ಕೆರೆ	2. ಬಿ. ಕೆ. ಕೆರೆ
3. ವೀರಲಗೊಂಡಿ ಕೆರೆ	4. ದಳವಾಯಿ ಹಳ್ಳಿ ಕೆರೆ
5. ಕಣಿವೇನಹಳ್ಳಿ ಕೆರೆ	6. ಉಡಗಟ್ಟಿ ಕೆರೆ
7. ಬೂದಿ ಬೆಟ್ಟ ಕೆರೆ	8. ನೇರಳೆ ಕುಂಟೆ ಕೆರೆ